ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore.karnataka.gov.in
E-mail ID: gmtech@cescmysore.org

Company Identity Number[CIN]:- U40109KA2004SGC035177

**'ಅಧೀಕೃತ ಜ್ಞಾಪನಾ'**

ವಿಷಯ: ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಹೊಸ/ದುರಸ್ತಿಗೊಂಡಿರುವ ಪರಿವರ್ತಕಗಳನ್ನು ಪರೀಕ್ಷಿಸುವ ಬಗ್ಗೆ.

ಉಲ್ಲೇಖ: 1) ಆದೇಶ ಸಂಖ್ಯೆ : ಸೆಸ್ಕ್/ ಪ್ರವ್ಯ(ತಾಂ)/ಕಾನಿಇಂ(ಡಿ.ಎಸ್.ಎಮ್)/ಸಕಾಇಂ(ಡಿ.ಎಸ್.ಎಮ್)/ 2015-16/ ಸಿವೈಎಸ್-850 ದಿನಾಂಕ : 25.02.2016.

2) ಆದೇಶ ತಿದ್ದುಪಡಿ ಸಂಖ್ಯೆ : ಸೆಸ್ಕ್/ ಪ್ರವ್ಯ(ತಾಂ)/ಕಾನಿಇಂ(ಡಿ.ಎಸ್.ಎಮ್)/ ಸಕಾಇಂ (ಡಿ.ಎಸ್.ಎಮ್)/ 2016-17/ ಸಿವೈಎಸ್-34 ದಿನಾಂಕ : 07.04.2016.

3) ಸಭಾನಡಾವಳಿಯ ಸಂಖ್ಯೆ : ಪ್ರವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-3/2023-24/ ಸಿವೈಎಸ್- ದಿನಾಂಕ :

4) ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಅನುಮೋದಿತ ಟಿಪ್ಪಣಿ ದಿನಾಂಕ:31.10.2023.

**ಪೀಠಿಕೆ :**

ದಿನಾಂಕ : 26.10.2023ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ವಿಭಾಗಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಹೊಸ ಪರಿವರ್ತಕಗಳ ಹಾಗೂ ರಿಪೇರಿಗೊಂಡ ಪರಿವರ್ತಕಗಳ ಪರೀಕ್ಷೆ ಕುರಿತು ಚರ್ಚಿಸಲಾಗಿ ಈ ಕೆಳಕಂಡ ಆದೇಶವನ್ನು ಹೊರಡಿಸಲು ನಿರ್ದೇಶಿಸಲ್ಪಟಿರುತ್ತೇನೆ.

**ಆದೇಶ**

ಸಂಖ್ಯೆ: ಸೆಸ್ಕ್/ಡಿಎಸ್ಎಮ್/01/09/2023-24/ CYS-1008 ದಿನಾಂಕ: 02 NOV 2023

1. ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಹೊಸ/ದುರಸ್ತಿಗೊಂಡಿರುವ ಪರಿವರ್ತಕಗಳನ್ನು ಮಾಪಕ ಪರೀಕ್ಷಾ ವಿಭಾಗದ ಅಧಿಕಾರಿಗಳಿಂದ ಪರೀಕ್ಷಾ ಕಾರ್ಯವನ್ನು ನಿರ್ವಹಿಸುವುದು.
2. ಚಾವಿಸನಿನಿ ವತಿಯಿಂದ ವಿಸ್ತರಣೆ ಮತ್ತು ಅಭಿವೃದ್ಧಿ ಹಾಗೂ ಇತರೆ ಕಾಮಗಾರಿಗೆ ಖರೀದಿಸುವ ಎಲ್ಲಾ ಹೊಸ ಪರಿವರ್ತಕಗಳನ್ನು ಆಯಾ ವೃತ್ತ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಿದ ನಂತರವೇ ಉಗ್ರಾಣದ ಲೆಕ್ಕಕ್ಕೆ ಪಡೆಯುವುದು.
3. ಪೂರ್ಣ ಗುತ್ತಿಗೆ ಆಧಾರದ ಕಾಮಗಾರಿಗಳಾದ ಗಂಗಾ ಕಲ್ಯಾಣ/ ನೀರಾವರಿ ಪಂಪ್ ಸೆಟ್/ಕುಡಿಯುವ ನೀರು/ ಎಸ್.ಡಿ.ಪಿ/ ಎಸ್.ಸಿ.ಪಿ /ಟಿ.ಎಸ್.ಪಿ/ ವಸತಿ ಬಡಾವಣೆ ಹಾಗೂ ಇತರೆ ಯೋಜನೆಗಳಿಗೆ ಕಾರ್ಯಪ್ರೇಷಣೆ ನೀಡಲಾಗಿರುವ ಏಜನ್ಸಿಗಳು ಅಳವಡಿಸುವ ಪರಿವರ್ತಕಗಳನ್ನು ಆಯಾ ವೃತ್ತ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಿದ ನಂತರವೇ ಕ್ಷೇತ್ರಕ್ಕೆ ಅಳವಡಿಸುವಂತೆ ಕ್ರಮವಹಿಸುವುದು.

4. ಸ್ವಯಂ ನಿರ್ವಹಣೆ ಕಾಮಗಾರಿಯಡಿ ಗ್ರಾಹಕರು ಖರೀದಿಸುವ ಎಲ್ಲಾ ಪರಿವರ್ತಕಗಳನ್ನು ರೂ.1000/-+ ಜಿ.ಎಸ್.ಟಿ ಯನ್ನು ಪಾವತಿಸಿಕೊಂಡು ಆಯಾ ವೃತ್ತ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಿಸಿದ ನಂತರವೇ ಕ್ಷೇತ್ರಕ್ಕೆ ಅಳವಡಿಸುವಂತೆ ಕ್ರಮವಹಿಸುವುದು.

5. ಹೊಸ ಪರಿವರ್ತಕಗಳನ್ನು ಪರೀಕ್ಷಿಸಿದ ನಂತರ ಪರಿವರ್ತಕದ Name plate ಹಾಗೂ Tank ಗಳಿಗೆ ಮಾಪಕ ವಿಭಾಗ ಮುದ್ರೆಗಳನ್ನು(seal) ಅಳವಡಿಸುವುದು.

6. ದುರಸ್ತಿದಾರ/ ವಿತರಕರವರಿಂದ(Supplier) ದುರಸ್ತಿಗೊಂಡ ಎಲ್ಲಾ ಪರಿವರ್ತಕಗಳನ್ನು ವಿಭಾಗಗಳಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಪರೀಕ್ಷಿಸಿ ಉಗ್ರಾಣದ ಲೆಕ್ಕಕ್ಕೆ ಪಡೆಯುವುದು.

7. ಪರಿವರ್ತಕಗಳನ್ನು ಪರೀಕ್ಷಿಸುವಾಗ ಕಾರ್ಯಪ್ರೇಷಣೆಯಲ್ಲಿ ನೀಡಲಾಗಿರುವ ನಿಯಮ ಮತ್ತು ಷರತ್ತುಗಳನ್ವಯ ಕ್ರಮವಹಿಸುವುದು.

8. ಎಲ್ಲಾ ಪರಿವರ್ತಕ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಕ್ಯಾಮರಾ ಅಳವಡಿಸುವಂತೆ ವಿಭಾಗಾಧಿಕಾರಿಗಳು ಕ್ರಮ ವಹಿಸುವುದು.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು/ಹಾಸನ
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ , ಚಾವಿಸನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ,
4. ಉಪಪ್ರಧಾನ ವ್ಯವಸ್ಥಾಪಕರು, ಟಿ.ಎ.ಕ್ಯೂಸಿ-1/2, ನಿಗಮ ಕಛೇರಿ, ಚಾ.ವಿ.ಸ.ನಿ.ನಿ., ಮೈಸೂರು.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಾಪಕ ಪರೀಕ್ಷಾ ವಿಭಾಗ, ಚಾವಿಸನಿನಿ, ಮೈಸೂರು/ಹಾಸನ
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಲ್.ಟಿ/ಹೆಚ್.ಟಿ. ರೇಟಿಂಗ್, ಚಾವಿಸನಿನಿ
7. ಉಪ-ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಾರ್ಯಾಲಯ, ಚಾವಿಸನಿನಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಸಹಾಯಕರು/ ಮಾನ್ಯ ನಿರ್ದೇಶಕರು (ತಾಂತ್ರಿಕ) ರವರ ತಾಂತ್ರಿಕ ಸಹಾಯಕರು ಇವರ ಗಮನಕ್ಕೆ ಹಾಗೂ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಗಮನಕ್ಕೆ ತರಲು ಸಲ್ಲಿಸಿದೆ.

ಮುಖ್ಯ ಕಡತ/ ಕಛೇರಿ ಪ್ರತಿ.